ತಾರೀಖು 4ನೇ ಜನವರೀ 1887.

(ರೇಡೆಂಟರ ಅಪ್ಪಣೆ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷ್ಟ್ ಕೇರಿ,) ಬೆಂಗಳೂರು ಪಹರ್ ದೇಖೀಲ್ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1890ನೇ ಇಸವಿ ಮಾರ್ಚಿ 31ನೇ ತಾರೀಖುವರೆಗೆ ಆಗುವ ಮೂರು ವರುಷ ಕಾಲಪರಿಯಂತ ಕೇಂದೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಕೋರಲ್ಪಟ್ಟವೆ. ಬೆಂಗಳೂರು ಡಿಸ್ಟ್ರಿಕ್ಟಿಗೆ, ಇದರಡೀಕಂಡ ತಾಲ್ಲೂಕುಗಳು ಕೇರಿ ಇರತ್ತವೆ :—

1 ಬೆಂಗಳೂರು	5 ಕಾನಖಾನಹಳ್ಳಿ	8 ಆನೆಕಲ್
2 ಹೊಸಕೋಟೆ	6 ಮಾಗಡಿ	9 ದೇವನಹಳ್ಳಿ
3 ದೊಡ್ಡಬಳ್ಳಾಪುರ	7 ಕ್ಲೋಸ್‌ಪ್ಯಾಟೆ, ಚನ್ನಪಟ್ಟಣದ ಡಿ॥ ಅ ಮಲ್‌ದಾರ್ ಛಾರ್ಜಿನಪ್ರಕೇದೇಖೀಲ್	
4 ನೆಲಮಂಗಲ		

2. ಯಪ್ಪರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲಿಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್‌ನಿ ಲಿಫಾಫೆಯೊಳಗೆ ಹಾಕಿ ಬಂದುಮಾಡಲ್ಪಟ್ಟು "ಬೆಂಗಳೂರು ಡಿಸ್ಟ್ರಿಕ್ಟಿನೊಳಗೆ ಕೇಂದಿ ಬಿಕ್ರಿಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯಂತಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ಯ 1887ನೇ ಇಸವಿ ಫಿಬ್ರವರೀ 17ನೇ ಮಂಗಳವಾರ ಮಧ್ಯಾನ್ನದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ತಿಳಿಸಾರಸ್ ಮಾಡುವ ಬಗ್ಗೆ ಡೆಪ್ಯೂಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲಿಯಾನಾ ಇಜಾರೆ ಮೊಬಲಗು ಪೈಕೀ ಹನ್ನೆರಡರಲ್ಲಿ ವಂದು ಭಾಗವಾಗಲೀ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತೀಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು : ಚಡದರ ಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಕಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯೂಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜೂಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿ ಹೋದ ದರಖಾಸ್ತುದಾರನ ಲುಕ್ಸಾನಿಗೆ ಬಳಪಟ್ಟು ಅನ್ಯಥಾ ವಿಲೇಮಾಡಲ್ಪಡುವದು.

ಪರತ್ತುಗಳು.

I. ಸಾಲೀಯಾನಾ ಇಜಾರೆ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮೂರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದ

ಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮೊಹೆಯಾನಾ ಸಮನಾದ ಐಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು : ಅಂತಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮ್ಮಿ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟರೀತಿಯಾಗಿ ಇ ಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀದೇಖೀಲ್ ತ ಮಾಂ ಬಾಕಿಗಳನ್ನೂ ಹಾಗೆ ಇಜಾರೆ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಲೇ ಮಾಡುವದರಿಂದಾಗಲಿ, ಉಂ ಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮ್ಮಿ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿ ದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಕೀ ಡೆಪ್ಯುಟಿ ಕ ಮ್ಮಿಷನರವರಿಗೆ ಯಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಕ್ಷ್ತು ದಾರ್ರಿಗೆ ಡೆಪ್ಯುಟಿ ಕಮ್ಮಿರ್ಷರವರಿಂದ ಮಾಮೂಲ್ ಲೈಸೆನ್ಸಿಗಳು, ಮಾಮೂಲ್ ನಮೂನೆಯಲ್ಲಿ ಕೊ ಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಡೋಕ್ತವಾದ ಮಂಜೂರಾತಿಯಿಲ್ಲದೆ, ಇಜಾರೇದಾರನು ಹಾಲೀ ಕೇಂದಿ ಪುರೋಕ್ಷ್ತು ಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿಗರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವ್ಯಕ್ತತೆಯು ಸಬಬುಗಳಮೇಲೆ ಯಾವ ಅಂಗಡಿಗಳನ್ನಾ ದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿರ್ಷರು ಅರ್ಜರಾಗಿರುತ್ತಾರೆ. ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಕೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಬಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆ ಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದು ಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ಮತ್ತು ಇನಾಂದಾರರುಗಳಿಗೆ ಕೇಂದಿ ಉತ್ಪತ್ತಿಗಾಗಿ ಬರಬೇಕಾದ ಈಡುಮೊಬಲುಗುಗಳ ವಿಷಯಗಳಲ್ಲಿ ಉಂಟಾಗುವ ತಕರಾರ್‌ಗಳ ನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತ ಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿ ಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ದಿರ್ವಾರವರಿಂದ ಅಪ್ಪೀಲು ನಲ್ಲಾಗಲಿ ಸಲಾಯಿಸಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು, ಜಮ್ಮಿ ಕಂದಾಯದ ಬಾಕಿ ವಸೂಲಿಬಗ್ಗೆ ತತ್ಕಾಲ ದಲ್ಲಿ ಜಾರೀ ಇರತಕ್ಕ ರೂಲಿಗೆಅನುಸಾರವಾಗಿ, ಕಂಟ್ರಾಕ್ಟುದಾರರಿಂದ ವಸೂಲು ಮಾಡಲ್ಪಡತಕ್ಕವು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಕೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯು ಟಿ ಕಮ್ಮಿಷನರಿಂದ ವಿಕೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪ ಡತಕ್ಕವು.

VII. ಯೂರೋಪಿಯರ್ ಸೋಲ್ಜರುಗಳ ಬೆಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯೋ ವೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಕೇಂದಿ ಪುರೋಕ್ಷ್ತು ಬಗ್ಗೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟೇ ಮಾಡಲ್ಪಟ್ಟ ತೆಂಬ ನಷ್ಟದ ಬಗ್ಗೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಪಾಜೆನವರು ತಮ್ಮ ಕಡೇ ಆಬ್ಕಾರಿ ಕಂಟ್ರಾಕ್ಟರ ನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (a) ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮ್ಮಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹ ದ್ದಿನೊಳಗೆ ಪುರೋಕ್ಷ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಕೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ

ಅನುಭವಿನಲ್ಪಡತಕ್ಕ ಜಮ್ರ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುವದಿಲ್ಲ, ಮತ್ತು ಗವರ್ಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಕೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕುವದಿಲ್ಲ. ಡಿಪ್ಯುಟಿ ಕಮ್ಮಿಷನರವರು ಆಗಿಂದಾಗ್ಗೆ ನಿಯಮಿಸುವ ಸ್ಥಳಗಳಲ್ಲೂ, ಪ ಷರತ್ತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (b) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಖ್ಕಗಳು ಇಡತಕ್ಕದ್ದು; ಅವುಗಳಲ್ಲಿ (1) ಕೇಂದಿ ಇಳಿಸಲ್ಪಟ್ಟ ಕೇಂದಿ ತೋಪುಗಳ ಹೆಸರು ಮತ್ತು ಅವುಗಳು ಇರತಕ್ಕ ಸ್ಥಳ, (2) ಕೇಂದಿ ಕಟ್ಟಿದ ಮರಗಳ ಸಂಖೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಕೇಂದಿ ತೇದಾದು, (4) ರೋಜೀನಾ ಬಿಕರೀಮಾಡಲ್ಪಟ್ಟ ಕೇಂದಿಯ ತೇದಾದು, ಮತ್ತು (5) ಕೇಂದಿಯೂ ಸರಬರಾಯಿ ಮಾಡಲ್ಪಟ್ಟ ದುಕ್ಕಾಗಳ ಹೆಸರು ಈಬಾಬತು ತಪಶೀಲುಗಳು ತೋರಿಸತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್ದಾರರಿಂದಾಗಲೀ ಯಾ ಆಬ್ಕಾರ್ಯಿ ಡಿಪ್ಯುಟಿ ಕಮ್ಮಿಷನರಿಂದ ವೌಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರಿಂದಾಗಲೀ ತನಿಖೆ ನೋಡಲ್ಪಡುವಬಗ್ಗೆ ಖುಲ್ಲಾ ಇರತಕ್ಕವು, ಮತ್ತು ಇವುಗಳ ನಕಲು, ಡಿಪ್ಯುಟಿ ಕಮ್ಮಿಷನರಿಂದಾಗಲಿ ಅಮಲ್ದಾರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಕೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ಮೆಂಟಿನವರು ಮಾಡತಕ್ಕ ಯಾವ ವಿರ್ಯಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮವ್ಕೂಫ ಮಾಡಿ ಆ ಬಗ್ಗೆ ನ್ಯಾಯವಾದ ಈಡು ವೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯರ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯರ್ ಯಾ ಯೂರೇಜಿಯರ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಕೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಹಿತ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಹಿತ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಬಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಎಳೇ ಈಚಲು ಮರಗಳಿಂದ ಕೇಂದೀ ಇಳಿಸದೇಯೂ, ಮತ್ತು ಕೇಂದಿ ಇಳಿಸುವದಕ್ಕೋಸ್ಕರ ಜೀಕಾವ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಗೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

XII. ಕೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೂ, ರೊಟ್ಟೀ ಮಾಡತಕ್ಕವರಿಗೂ ಮಾರಲ್ಪಡತಕ್ಕದ್ದು.

	ಜ್ಞಾಸ್ತಿ. ಶೇರು ಬಂದಕ್ಕೆ ಕ್ರಯ.	ಕಮ್ಮಿ.	ರೊಟ್ಟೀ ಮಾಡುವವರಿಗೆ ಶೇರು ಬಂದಕ್ಕೆ ಕಾಯಂ ಖರೀದಿ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಸಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲೆ ಬೆಂಗಳೂರು ಷಹರ್‌ನಲ್ಲಿ	0 1 6	0 1 0	0 1 0
ಬೆಂಗಳೂರು ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬೆಗಳಲ್ಲಿ	0 1 3	0 0 10	
ಡಿಟೋ ಗಾವ್‌ಗಾನೆಗಳಲ್ಲಿ	0 1 0	0 0 8	

6. ಕೇಂದಿ ಸೇಗಿಸುವಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯವನ್ನು ಮುನತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸ್ರ 1887ನೇ ಇಸವಿ ಏಪ್ರೆಲ್ 1ನೇ ತಾರೀಖು ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ 3 ವರುಷಗಳ ಕಾಲದ ಪರ್ಯಂತ ಕೇಂದಿ ಬಿಕ್ರೀ ಮಾಡುವ ಒಟ್ಟುಸ್ವಾತಂತ್ರ್ಯವೆಬ್ಗೆ ದರಖಾಸ್ತುಗಳು ಮಾಡಬಹುದೆಂದು ಇದರಿಂದ ಕೋರಲ್ಪಟ್ಟಿರುತ್ತೆ. ಕೋಲಾರ ಡಿಸ್ಟ್ರಿಕ್ಟಿಗೆ, ಇದರಡಿ ಕಂಡ ತಾಲ್ಲೂಕುಗಳು ಕೇರಿಯಿರುತ್ತವೆ.

1. ಕೋಲಾರ.
2. ಬೌರಿಂಗ್‌ಪೇಟೆ.
3. ಚಿಂತಾಮಣಿ, ಶ್ರೀನಿವಾಸಪುರದ ರೇಂಜ್ ದೇಖೀಲ್.
4. ಮುಳಬಾಗಲ್.
5. ಸಿಡ್ಲಘಟ್ಟ.
6. ಚಿಕ್ಕಬಳ್ಳಾಪುರ.
7. ಬಾಗೇಪಲ್ಲಿ, ಗುಡಿಬಂಡೆ ರೇಂಜ್ ದೇಖೀಲ್.
8. ಗೋರೀಬಿದನೂರು.
9. ಮಾಲೂರು.

2. ಯಷ್ಟ್ಯರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್‌ನೀ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಕೋಲಾರ ಡಿಸ್ಟ್ರಿಕ್ಟಿನೊಳಗೆ ಕೇಂದಿ ಬಿಕ್ರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂತ ಲಿಫಾಫೆ ಮೇಲೆ ಬರೆದುಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ರ 1887ನೇ ಇಸವಿ ಫೆಬ್ರವರಿ 15ನೇ ಮುಕ್ತಮಿನ ಸಾಯಿಂಕಾಲ 6 ಘಂಟೆಗಳ ವಳಗಾಗಿಯಾಗಲಿ, ತತ್ಪೂರ್ವವಾಗಲಿ, ಕೋಲಾರದಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು; ಅಥವಾ 1887ನೇ ಇಸವಿ ಫಿಬ್ರವರಿ 17ನೇ ಮುಕ್ತಮಿನ ಮಧ್ಯಾನ್ನದಲ್ಲಿ ಯಾ ತತ್ಪೂರ್ವದಲ್ಲಿಯಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫಿಸಿನಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಪಾವತಿ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆಶಿಫಾರಸ್ ಮಾಡುವಬ್ಗೆ ಡೆಪ್ಯೂಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಪರಾ ಬರೆಯಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಬಂದು ಭಾಗವಾಗಲಿ (ಅಥವಾ ಬಂದು ತಿಂಗಳ ಪಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು; ಜಡದರೆ ಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯೂಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ, ಒಂದು ಕರಾರ್‌ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅ-ಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾವಿಲಾ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾನೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮುರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ

ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾ ೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮ್ಮಿ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅವಾನಿಕೆಳಗೆ ಇಟ್ಟು ಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಸುನಶ್ಚ ಹರಾಜ್ ಹಾಕುವದರಿಂದಾಗಲಿ, ಇತರ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಮ್ಮಿ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮ್ಮಿ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾ ೀ ಕೊಡಲಿಕ್ಕೆ ತಪ್ಪಿದ ವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರು ಯಿರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸುಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಖೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಕೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ಟರು ಅರ್ಹರಾಗಿರುತ್ತಾರೆ, ಮತ್ತು ಇಜಾರೆದಾರನು ಆಬಗ್ಯಾಗಿ ಯಾವಈಡು ಮೊಬಲಗನ್ನೂ ಕೇಳಕೂಡದು.

III. ಕೇಂದಿಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟು ಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳು ಮತ್ತು ಇನಾಂದಾರರುಗಳಿಗೆ ಕೇಂದೀ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯಗಳಲ್ಲಿ ಉಂಟಾಗುವ ತಕರಾರುಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದಿವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂಥಾ ಫೈಸಲಾತಿಯಲ್ಲಾಗಲೀ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲೀ ಸಲಾಯಿಸಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗುಗಳು, ಜಮ್ಮಿ ಕಂದಾಯದ ಬಾಕಿ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ್ ಅನುಸರಿಸಿ, ಕಂಟ್ರಾಕ್ಟುದಾರರಿಂದ ವಸೂಲ್‌ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಕೇಂದೀ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯರ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯೋವೊಕ್ತಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಕೇಂದೀ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟ ತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಪೂಜೆನವರು ತಮ್ಮಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII (*a*). ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮ್ಮಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಕೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ

ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮ್ರ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟ್ಗಳಿಗೆ ಕೇಂದೀ ವದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯೂಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್ತುಗಳ ಪ್ರಕಾರವೂ ಮಾತ್ರವೇಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII (*b*). ಇಜಾರೇದಾರರು, ಪ್ರತಿ ತಾಲ್ಲೂಕಿಗೂ ಸಾಚ ಮತ್ತು ಕರಾರ್ವಾಕಾ ಲೆಕ್ಕಗಳು ಇಡತಕ್ಕದ್ದು; ಅವುಗಳಲ್ಲಿ(1) ಕೇಂದೀ ಇಳಿಸಲ್ಪಟ್ಟ ಕೇಂದೀ ತೋಪುಗಳ ಹೆಸರು ವ ಅವುಗಳಿರತಕ್ಕ ಸ್ಥಳ,(2) ಕೇಂದೀ ಕಟ್ಟಿದ ಮರಗಳ ಸಂಖೆ, (3)ರೋಜೀನಾ ಉತಾರ್ ಮಾಡಲ್ಪಟ್ಟ ಕೇಂದಿಯ ತೇದಾದು, (4)ರೋಜೀನಾ ಬಿಕರಿಮಾಡಲ್ಪಟ್ಟ ಕೇಂದಿಯ ತೇದಾದು, ಮತ್ತು (5)ಕೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾ್ನಗಳ ಹೆಸರು ಈ ಬಾಬತು ತಪಸೀಲ್ಗಳು ತೋರಿಸತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್ದಾರರಿಂದಾಗಲೀ ಯಾ ಆ ಬಗ್ಯಾಗಿ ಡೆಪ್ಯೂಟಿ ಕಮ್ಮಿಷ್ನರವರಿಂದ ಮೊಕರರ್ಮಾಡಲ್ಪಟ್ಟ ಇತರ ಯಾವ ಆಫೀಸರರಿಂದಾಗಲೀ ತನಿಖೇ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವ್ವೆ. ಮತ್ತು ಇವುಗಳ ನಕಲು ಡೆಪ್ಯೂಟಿ ಕಮ್ಮಿಷನರಿಂದಾಗಲೀ ಅಮಲ್ದಾರರಿಂದಾಗಲೀ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಕೇಂದೀ ವಿನಾ ಇತರ ತರಹೇವು ಷರಾಬ್ ಯಾ ಸ್ಪಿರಿಟ್ಗಳ ವಿಷಯದಲ್ಲಾಗಲಿ, ಗವರ್ಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟ್ಗಳ ಪೈಕೀ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮೊಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯರ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯರ್ ಯಾ ಯೂರೇಜಿಯರ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಬಿಟ್ಟ ಶಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಕೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಕ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಕ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಬಂದು ಗಾಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಎಳೇ ಈಚಲು ಮರಗಳಿಂದ ಕೇಂದಿ ಇಳಿಸದೇಯೂ, ಮತ್ತು ಕೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಕೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಶೇರು ವಂದಕ್ಕೆ ಕ್ರಯ.	
	ಜಾಸ್ತಿ.	ಕಮ್ಮಿ.
	ರೂ. ಆ. ಪೈ.	ರೂ. ಆ. ಪೈ.
ಕೋಲಾರ ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬೆಗಳಲ್ಲಿ	0—1—3	0—0—10
ಡಿಟೋ ಗಾವ್ಗಾನೆಗಳಲ್ಲಿ	0—1—0	0—0—8

6. ಕೇಂದಿ ರವಾನೆ ಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತುಮಕೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ ಮೂರುವರುಷಗಳ ಕಾಲದಲ್ಲಿ ಕೇಂದಿಯನ್ನು ಬಿಕರೀಮಾಡುವ ವಟ್ಟು, ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ. ತುಮಕೂರು ಡಿಸ್ಟ್ರಿಕ್ಟಿಗೆ, ಇದರಡೀ ಕಂಡ ತಾಲ್ಲೂಕುಗಳು ಕೇರಿ ಇರುತ್ತವೆ.

1 ತುಮಕೂರು	5 ಗುಬ್ಬಿ
2 ಮದ್ದಗಿರಿ (a)	6 ತಿಪಟೂರು (c)
3 ಚಿಕ್ಕನಾಯ್ಕನ ಹಳ್ಳಿ (b)	7 ಪಾವಗಡ
4 ಟಿರಾ	8 ಕುಣಿಗಲ್

2. ಎಪ್ಪರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಕ್ರಮವಾಗಿ ಇಂಡಾರ್ಸುಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್ಟಿನೀ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ತುಮಕೂರು ಡಿಸ್ಟ್ರಿಕ್ಟಿನೊಳಗೆ ಕೇಂದಿ ಬಿಕ್ರಿಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂತ ಲಿಫಾಫೆ ಮೇಲೆ ಬರದುಕಳುಹಿಸತಕ್ಕದ್ದು.

3. ದರಖಾಸ್ತಗಳು ಸ್ಯ 1887ನೇ ಇಸವಿ ಫಿಬ್ರವರಿ 15ನೇ ಮಕ್ತುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ, ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಹೆಸರಿಗೆ ಬರೆಯಲ್ಪಟ್ಟು ತುಮಕೂರಲ್ಲಿ ಡೆಪ್ಯುಟಿ ಕಮ್ಮಿಷ್ಟರವರ ಆಫೀಸಿನಲ್ಲಿ ಪಾವತೀಮಾಡಲ್ಪಡತಕ್ಕದ್ದು. ಅಥವಾ ಅವರಿಗೆ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ಟರವರ ಆಫೀಸಿನಲ್ಲಿ 1887ನೇ ಇಸವಿ ಫಿಬ್ರವರೀ 17ನೇ ಮಕ್ತುಮಿನ ಮಧ್ಯಾನ್ಹದಲ್ಲಿ ಯಾ ತತ್ಪೂರ್ವದಲ್ಲಿ ಪಾವತೀ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ಟರವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಶಿಫಾರಸ್ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಜುನಾಯಿಸಿ ಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ ಮೈಸೂರು ದಿವಾನ್ಸಾಹೇಬರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಬಂದು ಭಾಗವಾಗಲಿ (ಅಥವಾ ಮಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು

4. ದಿವಾನರವರ ತೀರ್ಮಾನ ಫಾಯಿಸ್ ಮಾಡಲ್ಪಟ್ಟುಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ಗಳು, ಅವರು ಖಾಯಿಷ್ಮಾಡಿದಾದ ಅವರಿಗೆ ವಾಪಸ್ ಮಾಡಲ್ಪಡುವದು ; ಚಡದರ ಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

5 ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಇಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿ ಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮ ಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಫಾಪಾಕಾಗದದ ಮೇಲೆ, ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್ಗಳು, ಗವರ್ಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿ ಹೋದ ದರಖಾಸ್ತುದಾರನ ಲುಕ್ಸಾನಿಗೆ ಬಳಪಟ್ಟು ಅನ್ಯಥಾ ವಿಲೇವಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇ ಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮೂರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು.

(a) ಕೊರಟಿಗೆರೆ ಡೆಪ್ಯುಟಿ ಅಮಲ್ದಾರ್ರ ಫಾರ್ಜು ದೇಖೀಲ್.

(b) ಜುಳಿಯೂರದ ಡೆಪ್ಯುಟಿ ಅಮಲ್ದಾರ್ರ ಫಾರ್ಜು ದೇಖೀಲ್.

(c) ತುರ್ವೆಕೆರೆ ಡೆಪ್ಯುಟಿ ಅಮಲ್ದಾರ್ರ ಫಾರ್ಜು ದೇಖೀಲ್.

ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡ ತಕ್ಕದ್ದು; ಅಂತಾ ಬಾಕೀ ಮೊಬಲಗುಗಳು ವಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ವಾವತೀಯಾಗದೆ ನಿಂತರೆ ಅನುಗಳು ಜಮ್ಮಾ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅವಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಬೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಶ್ಚ ಹರಾಜ್ ಹಾಕುವದರಿಂದಾಗಲಿ, ಇತರ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮ್ಮಾ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿ ೀ ಡೆಪ್ಯುಟೆ ಕಮ್ಮಿಷನರವರಿಗೆ ಯಿಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರಿಗೆ ಡೆಪ್ಯುಟೆ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸುಗಳು, ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟೆ ಕಮ್ಮಿಷನರವರ ಕಂಬೋಕ್ತವಾದ ಮುಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಕೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದುಹಾಕುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟೆ ಕಮ್ಮಿಷರ್‌ರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಕೇಂದೀಗೆ ಬದಲಾಗಿ ಅಥವಾ ಅಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ ಗುತ್ತಿಗೇದಾರನು ಎಷ್ಟು ಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳು ಮತ್ತು ಇನಾಂದಾರರುಗಳಿಗೆ ಕೇಂದೀ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯಗಳಲ್ಲಿ ಉಂಟಾಗುವ ತಕರಾರುಗಳನ್ನು ಡಿಸ್ಟ್ರಿಕ್ಟು ಡೆಪ್ಯುಟೆ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿಗುರಿಯಾಗತಕ್ಕದ್ದು. ಡೆಪ್ಯುಟೆ ಕಮ್ಮಿಷರವರಿಂದ ಅಂಥಾ ಫೈಸಲಾತಿಯಲ್ಲಿ ಯಾಗಲೀ ಅಥವಾ ದಿವಾನರವರಿಂದ ಅಪ್ಪೀಲಿನಲ್ಲಾಗಲೀ ವಾವತೀಮಾಡಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗುಗಳು ಜಮ್ಮಾ ಕಂದಾಯದ ಬಾಕೀ ವಸೂಲ್ ಬಗ್ಯೆ ತತ್ಕಾಲದಲ್ಲಿ ಜಾರಿ ಇರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು,

VI. ಬಿಗ್ಯೆ 6 ಘಂಟೆಗೆ ಮುಂದಾಗಿ ಕೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟೆ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯರ್ಯ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯೋಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಕೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಪೊಜಿಸನವರು ತಮ್ಮ ಕಛೇರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII (a). ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರು ಜಮ್ಮಾನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಜೆಲ್ಲ ತಯಾರ್ ಮಾಡುವ ಬಗ್ಯಾಗಲಿ ಕೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ

ಅನುಭವಿಸಲ್ಪಡತಕ್ಕ ಜಮ್ಮಿಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಕೇಂದೀ ವದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿ ಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಗೆ ನಿಯಮಿಸುವ ಸ್ಥಳಗಳಲ್ಲೂ, ವ ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII (b). ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸುಜಾ ಮತ್ತು ಕರಾರ್‌ವಾಕಾ ಲೆಕ್ಕಗಳು ಇಡತಕ್ಕದ್ದು ಅವುಗಳಲ್ಲಿ (1) ಕೇಂದಿ ಇಳಿಸಲ್ಪಟ್ಟ ಕೇಂದಿ ತೋಪುಗಳ ಹೆಸರು ವ ಅವುಗಳಿರತಕ್ಕ ಸ್ಥಳ, (2)ಕೇಂದಿ ಕಟ್ಟಿದ ಮರಗಳ ಸಂಖೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಕೇಂದಿಯ ತೇದಾದು, (4)ರೋಜೀನಾ ಬಿಕರಿ ಮಾಡಲ್ಪಟ್ಟ ಕೇಂದಿಯ ತೇದಾದು ಮತ್ತು (5) ಕೇಂದಿಯು ಸರಬರಾಯಿ ಮಾಡಲ್ಪಟ್ಟ ದುಕ್ಕಾಗಳ ಹೆಸರು ಈ ಬಾಬತು ತಪಶೀಲುಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರರಿಂದಾಗಲೀ ಯಾ ಆ ಬಗ್ಯಾಗ ಡೆಪ್ಯುಟಿ ಕಮ್ಮಿಷರವರಿಂದ ಮೊಕರರ್‌ಮಾಡಲ್ಪಟ್ಟ ಇತರ ಯಾವ ಆಫೀಸರರಿಂದಾಗಲೀ ತನಿಖೀ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು. ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷರಿಂದಾಗಲೀ ಅಮಲ್‌ದಾರರಿಂದಾಗಲೀ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸುರಾಯಿ ವಿಷಯದಲ್ಲಾಗಲಿ ಕೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲೀ, ಗವರ್ಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ವೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯರ್ಯ ಸೋಲ್ಜರಿಗಾಗಲಿ, ನಾವಿಗೆನಿಗಾಗಲಿ, ಯೂರೋಪಿಯರ್ಯ ಯಾ ಯೂರೇಜಿಯರ್ಯ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಬಬ್ಬ ಸಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಕೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಕ್ಷುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಕ್ಷುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಷಭಾಗಗಳುಳ್ಳ ಎಳೇ ಈಚಲು ಮರಗಳಿಂದ ಕೇಂದೀ ಇಳಿಸದೇಯೂ, ಮತ್ತು ಕೇಂದೀ ಇಳಿಸುವದಕ್ಕೋಸ್ಕರ ಜೀವಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಪೂಪಯೋಗಿಸದೆಯೂ, ಇರುವ ಬಗ್ಯೆ ಜವಾಜ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಕೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ವಾರಲ್ಪಡತಕ್ಕದ್ದು.

	ಜಾಸ್ತಿ.. ಶೇರು ಬಂದಕ್ಕೆ ಕ್ರಯ.			ಕಮ್ಮಿ.		
	ರೂ.	ಆ.	ಪೈ.	ರೂ.	ಆ.	ಪೈ.
ತುಮಕೂರು ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬುಗಳಲ್ಲಿ	0	1	3	0	0	10
ಡಿಟೋ ಡಿಟೋ ಗಾವಗಾನೆಗಳಲ್ಲಿ	0	1	0	0	0	8

6. ಕೇಂದೀ ರವಾನೆ ಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

7. ಹಿಂದಿನ ಹಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

ಮೈಸೂರು ಡಿಸ್ಟ್ರಿಕ್ಟಿಗೆ ಕೇರಿದ ಯಿವರಡೀ ಕಂಡ ತಾಲ್ಲೂಕುಗಳಲ್ಲಿ, 1887ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1890 ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ ಮೂರು ವರುಷ ಕಾಲಪರಿಯಂತ ಕೊಂಬೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯ ದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ :—

1 ಮೈಸೂರು ತಾಲ್ಲೂಕು	8 ಚಾಮರಾಜನಗರ ತಾಲ್ಲೂಕು
2 ಶ್ರೀರಂಗಪಟ್ಟಣ ತಾಲ್ಲೂಕು	9 ಗುಂಡ್ಲುಪ್ಯೇಟೆ ತಾಲ್ಲೂಕು
3 ತಿರುಮಕೂಡ್ಲು ನರೀಪುರ ತಾಲ್ಲೂಕು	10 ನಂಜನಗೂಡು ತಾಲ್ಲೂಕು
4 ಮಂಡ್ಯ ತಾಲ್ಲೂಕು	11 ಅತ್ತಿಕುಪ್ಪೆ ತಾಲ್ಲೂಕು
5 ಯಡತೊರೆ ತಾಲ್ಲೂಕು	12 ನಾಗಮಂಗಲ ತಾಲ್ಲೂಕು
6 ಹುಣಸೂರು ತಾಲ್ಲೂಕು	13 ಮಳವಳ್ಳಿ ತಾಲ್ಲೂಕು
7 ಹೆಗ್ಗಡದೇವನಕೋಟೆ ತಾಲ್ಲೂಕು	14 ಯಳಂದೂರು ತಾಲ್ಲೂಕು

2. ಯಪ್ಪರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಕ್ರಮವಾಗಿ ಯಿಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್ಟಿನೀ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಮೈಸೂರು ಡಿಸ್ಟ್ರಿಕ್ಟಿನೊಳಗೆ ಕೇಂದಿ ಬಿಕ್ರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯೆಂತ ಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ಯ 1887ನೇ ಇಸವಿ ಫಿಬ್ರವರೀ 22ನೇ ಮಕ್ತುಮಿನ ಮಧ್ಯಾಹ್ನದೊಳಗಾಗಲಿ, ತತ್ಪೂರ್ವವಾಗಲಿ, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತಿ ಮಾಡಲ್ಪಡತಕ್ಕದ್ದು. ಆಗ ಸರೀ ದರಖಾಸ್ತುಗಳು ದರಖಾಸ್ತು ದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಸಿಫಾರಸು ಮಾಡುವ ಬಗ್ಯೆ ಡೆಪ್ಯುಟಿಕಮ್ಮಿಷನರು ಚುನಾಯಿಸಿ ಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಯಿಂಡಾರಸು ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕ ನಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ಟುಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು; ಜಡದ ದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ಪ್ರೆಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಈಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ಸಮೂನೆಯಲ್ಲಿ ಸರಿಯಾದ ಛಾಪಾಕಾಗದ ದ ಮೇಲೆ ಒಂದು ಕರಾರ್ ಬರಮಕೊಡತಕ್ಕದ್ದು, ಆತನು ಕರಾರಿಗೆ ರುಜುಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೆ ಇಡಲ್ಪಟ್ಟ ಡಿಪಾಜಿಟ್ಟುಗಳು, ಗವರ್ಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ದರಖಾಸ್ತು ದಾರನ ಲುಕ್ಸಾನಿಗೆ ಬಳಪಟ್ಟು ಅನ್ಯಥಾ ವಿಲೀ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬುದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನ (ತ ಪ್ರಕಾರ ಬಡ್ಡೀ ಕೊಡತಕ್ಕದ್ದು : ಅಂಥಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮ್ಮಾ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ

ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ; ಯಾ ಅವಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಶ್ಚ ಹರಾಜ್ ಹಾಕುವದರಿಂದಾಗಲಿ, ಯಿತರ ವಿಧವಾಗಿ ವಿಲೆ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿ ಕೀ ಡೆಪ್ಯೂಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೆ ಪುರೋಖ್ತುದಾರರಿಗೆ ಡೆಪ್ಯೂಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸುಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯೂಟಿ ಕಮ್ಮಿಷನರವರ ಕಂತೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೆದಾರನು ಹಾಲೀ ಕೇಂದೀ ಪುರೋಖ್ತು ಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯೂಟಿ ಕಮ್ಮಿಷನರು ಅರ್ಹರಾಗಿರುತ್ತಾರೆ, ಮತ್ತು ಇಜಾರೇದಾರನು ಆಬಗ್ಗೆಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಕೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವೆಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೆದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು, ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರುಗಳು ಮತ್ತು ಯಿನಾಂದಾರರುಗಳಿಗೆ ಕೇಂದಿ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯಗಳಲ್ಲಿ ಡಿಪ್ಟ್ಯುಕ್ಟು ಡೆಪ್ಯೂಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯೂಟಿ ಕಮ್ಮಿಷ್ನರವರಿಂದ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲೀ ಪಾವತೀ ಮಾಡಲ್ಪಡಬೇಕೆಂತಾ ಹುಕುಂಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲಿಬಗ್ಗೆ ತತ್ಕಾಲದಲ್ಲಿ ಜಾರೀ ಯಿರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದ್ಹಾಗಿ ಕೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯೂಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು

VII. ಯೂರೋಪಿಯರ್ಸ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಕ್ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಕೇಂದಿ ಪುರೋಖ್ತು ಬಗ್ಗೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚಲ್ಪಡುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಗೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (a) ಇಜಾರೇದಾರನು ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಜೆಲ್ಲ ತಯಾರ್ಮಾಡುವ ಬಗ್ಯಾಗಲಿ ಕೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನ್‌ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುವನಿಲ್ಲ, ಮತ್ತು ಗವರ್ಮೆಂಟಿನವರು ಯಾವಾಗಲಾ

ದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಕೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳು ವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳು ವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಗೆ ನಿಯಮಿಸುವ ಸ್ಥಳಗಳಲ್ಲೂ ವ ಷರತ್ತುಗಳ ಪ್ರಕಾ ರವೂ ಮಾತ್ರವೇ ಬಿಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b*) ಯಿಜಾರೇದಾರರು, ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಖ್ಕಗಳು ಯಿಡತಕ್ಕದ್ದು. ಅವುಗಳಲ್ಲಿ (1) ಕೇಂದಿ ಯಿಳಿಸಲ್ಪಟ್ಟ ಕೇಂದಿ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಕೇಂದಿ ಕಟ್ಟಿದ ಮರಗಳ ಸಂಖೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಕೇಂದಿಯ ತೇದಾದು, (4) ರೋಜೀನಾ ಬಿಕರೀಮಾಡಲ್ಪಟ್ಟ ಕೇಂದಿಯ ತೇದಾದು ಮತ್ತು (5) ಕೇಂದಿಯು ಸರಬರಾಯಿ ಮಾಡಲ್ಪಟ್ಟ ದರ್ಕಾರ್‌ಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತ ಕ್ಕದ್ದು. ಈ ಬಾಬತು ಲೆಖ್ಕಗಳು ಅಮಲ್ದಾರರಿಂದಾಗಲೀ ಯಾ ಆಬ್ಗ್ಯಾಗಿ ಡೆಪ್ಯುಟಿ ಕಮ್ಮಿಷ್ನರವರಿಂದ ಮೊಕರರ್ ಮಾಡಲ್ಪಟ್ಟ ಯಿತರ ಯಾವ ಆಫೀಸರರಿಂದಾಗಲೀ ತನಿಖೆ ನೋಡಲ್ಪಡತಕ್ಕ ಬಗ್ಗೆ ಖುಲ್ಲಾ ಯಿರತಕ್ಕವು; ಮತ್ತು ಯಿವುಗಳ ನಕಲು ಡೆಪ್ಯುಟಿ ಕಮ್ಮಿಷ್ನರವರಿಂದಾಗಲೀ ಅಮಲ್ದಾರರಿಂದಾಗಲೀ ಅಪೇಕ್ಷಿಸಲ್ಪಟ್ಟರೆ ಅವು ಯಿಜಾರೆದಾರನಿಂದ ಹಾಜರ್ ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಕೇಂದೀ ವಿನಾ ಯಿತರ ತರಹೇಯ ಪರಾಟೆ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನ್‌ಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡಿಗೆ ಬಾಧ್ಯತೆ ಉ ಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗವಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮುವ್ಕೂಫ್ ಮಾಡಿ ಆ ಬಗ್ಗೆ ನ್ಯಾಯವಾದ ಈಡು ಪೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿ ಕೊಂಡಿರುತ್ತಾರೆ.

X. ಯಾವ ಯೂರೋಪಿಯರ್ಸ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯರ್ಸ್ ಯಾ ಯೂರೇಜಿಯರ್ಸ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಬಬ್ಬ ಕಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿನ್ನಿದು ಕೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇ ದಾರ ಯಾ ಪುರೋಕ್ಕುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪುತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಕ್ಕುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗವರಿಗೆ ಬಂದು ಗಜದ ಎತ್ತ ರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಾವೇ ಈಚಲು ಮರಗಳಿಂದ ಕೇಂದೀ ಯಿಸದೇಯೂ, ಮತ್ತು ಕೇಂದಿ ಯಿಳಿಸು ವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳೂ ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಗೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ ನಡೆದರೆ ಅದರಿಂದ, ಮೊದಲನೇ ತಪ್ಪು ತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

XII. ಕೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು :—

	ಶೇರುವಂದಕ್ಕೆ ಖರೀದಿ	
	ಜಾಸ್ತಿ	ಕಮ್ಮಿ
	ರೂ. ಆ. ಪೈ.	ರೂ. ಆ. ಪೈ.
ಮೈಸೂರು ಪಟ್ಟಣದಲ್ಲಿ	0—1— 0	0—0— 8
ನಾಗಮಂಗಲ ವ ಅತ್ತಿಕುಪ್ಪೆ ಯಿತರ ತಾಲ್ಲೂಕು ಕಸಬಾಗಳಲ್ಲಿ ..	0—0—10	0—0— 6
ಅತ್ತಿಕುಪ್ಪೆ ವ ನಾಗಮಂಗಲದ ಕಸಬಾಗಳಲ್ಲಿ	0—1— 0	0—0— 6
ಗಾವಗಾನೆಗಳಲ್ಲಿ	0—0— 6	0—0— 4

6. ಕೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯವನ್ನು ಪಾವ ತೀಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಹಾಸನದ ಡಿಸ್ಟ್ರಿಕ್ಟಿಗೆ ಇದರಡಿ ಕಂಡ ತಾಲ್ಲೂಕುಗಳಲ್ಲಿ 1887ನೇ ಇಸವಿ ಏಪ್ರಿಲ್ 1ನೇ ತಾರೀಖು ಮೊದಲು 1890ನೇ ಇಸವೀ ಮಾರ್ಚಿ 31ನೇ ತಾರೀಖುವರಿಗೆ ಆಗುವ ಮೂರು ವರುಷ ಕಾಲಪರಿಯಂತ ಕೇಂದಿ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟವೆ.

1 ಹಾಸನ	5 ಬೇಲೂರು
2 ಮಂಜರಾಬಾದ್	6 ಅರಕೀಕೆರೆ
3 ಚನ್ನರಾಯಪಟ್ಟಣ	7 ಅರಕಲ್‌ಗೂಡು
4 ಹೊಳೇನರಸೀಪುರ	

ಕೇಂದಿ ಇಜಾರೆಯೊಳಗೆ ಸದರೀ 3 ವರುಷಗಳ ವಾಯಿದೆಯಲ್ಲಿ, ಮಲ್ನಾಡ್ ತಾಲ್ಲೂಕುಗಳ ಬಗೆನೀ ಹೆಂಡವನ್ನ ಮಾರುವ ಸ್ವಾತಂತ್ರ್ಯವಿರುವದಿಲ್ಲ ಇದನ್ನ ಪ್ರತ್ಯೇಕ ಪ್ರತ್ಯೇಕವಾಗಿ ಗ್ರಾಮವಾರ್ ಅಥವಾ ಫಿರಕಾವಾರಾಗಿ ಇಜಾರೆಗೆ ಕೊಡಲ್ಪಡುವದು.

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಆ ದರ ಸಂಗಡ ನಗದಾಗಿಯಾಗಲಿ ಗವರ್ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್‌ನೀ ಲಿಫಾಪೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಹಾಸನ ಡಿಸ್ಟ್ರಿಕ್ಟಿನೊಳಗೆ ಕೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯೆಂತ ಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ಯ 1887ನೇ ಇಸವಿ ಫಿಬ್ರವರೀ 19ನೇ ಮಕ್ಕಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಹೆಸರಿಗೆ ಮೇಲು ವಿಳಾಸ ಬರೆಯಲ್ಪಟ್ಟು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು, ಅಥವಾ 1887ನೇ ಇಸವಿ ಫಿಬ್ರವರೀ 22ನೇ ಮಕ್ಕಂ ಮಧ್ಯಾನ್ಹದೊಳಗಾಗಲಿ ತತ್ಪೂರ್ವವಾಗಲಿ ಮೈಸೂರು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಹಾಸನ ಡಿ|| ಡೆ|| ಕಮ್ಮಿಷನರವರಿಗೇನೇ ಪಾವತೀ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೇ ನಗದಾಗಿಯಾಗಲಿ ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂಥಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಜಹದರ ಖಾಸ್ತಾಗಲೀ, ಯಾವ ದರಖಾಸ್ತಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆ.

